# ಕಲಾ ನಿರ್ದೇಶನದ ಜೊತೆಜೊತೆ ನಟನೆ



**ಅವಿನಾಶ್ ಎಸ್. ದಿವಾಕರ್**
ಕಲರ್ಸ್ ಕನ್ನಡದ 'ನನ್ನ ದೇವ್ರು' ಸಚ್ಚಿದಾನಂದ

◆ **ಸಚ್ಚಿದಾನಂದ ಪಾತ್ರದ ಅನುಭವ ಹೇಗಿದೆ?**

ಈ ಪಾತ್ರದ ವಿವರವನ್ನು ಕೇಳಿದಾಗ ಇಂತಹ ಶಕ್ತಿಶಾಲಿ ಪಾತ್ರವನ್ನು ನಾನು ಮಾಡಬೇಕು ಎಂದುಕೊಂಡಿದ್ದೆ, ಅದು ಮತ್ತೆ ನೆನಪಿಗೆ ಬಂತು. ಧಾರಾವಾಹಿ ಪ್ರಸಾರದ ನಂತರ ವೀಕ್ಷಕರು ಅದನ್ನು ಸ್ವೀಕರಿಸಿದ ಬಗೆ ಕೂಡ ಇಷ್ಟ ಆಯಿತು. ತುಂಬ ಒಳ್ಳೆಯ ಪಾತ್ರ. ಪರೋಪಕಾರಿ ಮನೋಭಾವದ ಸಚ್ಚಿದಾನಂದ ಇದೇ ಕಾರಣಕ್ಕೆ ಜನರಿಗೆ ಇಷ್ಟ ಆಗಿದ್ದಾನೆ ಎನ್ನುವುದು ಸ್ಪಷ್ಟ.

◆ **ಅಭಿನಯಕ್ಕೆ ಪ್ರೇರಣೆಯಾದ ಸಂದರ್ಭ ನೆನಪಿಸಿಕೊಳ್ಳಬಹುದಾ?**

2019ರಲ್ಲಿ ಮೂಕಚಿತ್ರವನ್ನು ನನ್ನ ಗೆಳೆಯ ಮಾಡುತ್ತಿದ್ದ. ಆ ಸಿನಿಮಾ ಬಗ್ಗೆ ಆಗಾಗ ಕಾಲ್ ಮಾಡಿ ಮಾತನಾಡುತ್ತಿದ್ದೆವು. ಒಮ್ಮೆ ನಾನು ಕಾಲ್ ಮಾಡಿದಾಗ ಆ ದಿನ ನಟರೊಬ್ಬರು ಬಂದಿರಲಿಲ್ಲ. ಹಾಗಾಗಿ ಆ ಪಾತ್ರವನ್ನು ನನ್ನಿಂದ ಮಾಡಿಸಿದ. ಹೀಗೆ ಆಕಸ್ಮಿಕವಾಗಿ ಅಭಿನಯಕ್ಕೆ ನಾನು ಪ್ರವೇಶ ಮಾಡಿದೆ. ಕೆಲ ದಿನಗಳ ನಂತರ ಅದರ ನಿರ್ಮಾಪಕರು 'ಜುಗಾರಿ' ಸಿನಿಮಾ ಮಾಡಿದರು. ಅದನ್ನು ಅರವಿಂದ್ ನಿರ್ದೇಶಿಸಿದ್ದರು. ಅದರಲ್ಲಿ ಸಣ್ಣ ಪಾತ್ರಕ್ಕೆಂದು ಕರೆದರು. ಮೊದಲ ಆಡಿಷನ್ನಿನಲ್ಲಿ ನಾನು ವಿಫಲನಾದೆ. ಎರಡನೇ ಆಡಿಷನ್‌ನಲ್ಲಿ ಆಯ್ಕೆ ಮಾಡಿದರು. ಚಿತ್ರೀಕರಣದ ಎರಡು ದಿನ ಮೊದಲಷ್ಟೇ ನಾನೇ ಪ್ರಧಾನ ಪಾತ್ರ ಮಾಡುತ್ತಿದ್ದೇನೆ ಎಂದು ಗೊತ್ತಾಯಿತು.

◆ **ನಿಮ್ಮ ತಾತ ನರಸಿಂಹರಾಜು ಅವರ ಅಭಿನಯವನ್ನು ನಟರಾಗಿ ಹೇಗೆ ನೋಡುತ್ತೀರಿ?**

ಅವರು ಮಾಡಿದಂತಹ ಪಾತ್ರಗಳ ಬಗ್ಗೆ ಮಾತನಾಡಲು ಸಾಧ್ಯವಿಲ್ಲ. ತಮ್ಮ 4ನೇ ವಯಸ್ಸಿನಿಂದಲೇ ಅವರು ನಟನೆಯನ್ನು ಆರಂಭಿಸಿದರು. ಅವರ ಅಭಿನಯಯಾನ ಅದ್ಭುತ. ನಾಟಕ ಕಂಪನಿಯೊಂದರಲ್ಲಿ ಅಭಿನಯವೇ ಅವರ ಉದ್ಯೋಗ ಆಗಿತ್ತು. ತಮ್ಮ ಜೀವನವನ್ನೇ ನಟನೆಗೆ ಮುಡುಪಾಗಿ ಇಟ್ಟಿದ್ದರು. ನಟನೆಯ ಜೊತೆ ಒಂದು ಸಂಸ್ಥೆಯನ್ನು ಕಟ್ಟುವ ಬಗೆ ಕೂಡ ಅವರಿಗೆ ಚೆನ್ನಾಗಿ ಗೊತ್ತಿತ್ತು ಎಂದು ಅಜ್ಜಿ ಹೇಳಿದ್ದನ್ನು ಕೇಳಿದ್ದೇನೆ. ನನ್ನ ತಾತನನ್ನು ನಾನು ನೋಡಿಲ್ಲ. ಅವರ ಅಭಿನಯ ಎಲ್ಲರಿಗೂ ಗೊತ್ತಿರುವ ವಿಷಯ. ನರಸಿಂಹರಾಜು ಅವರನ್ನು ಚಾರ್ಲಿ ಚಾಪ್ಲಿನ್ ಅವರಿಗೆ ಹೋಲಿಸಿ ನೋಡುವ ಕಲಾಭಿಮಾನಿಗಳು ಇದ್ದಾರೆ. ಆ ಸಮಯದಲ್ಲಿ ಇಂದಿನಂತೆ ಸಾಮಾಜಿಕ ಮಾಧ್ಯಮ ಇದ್ದಿದ್ದರೆ ನರಸಿಂಹರಾಜು ಅವರ ವಿಭಿನ್ನ ಅಭಿನಯ ಜಗತ್ತಿಗೆ ಗೊತ್ತಾಗುತ್ತಿತ್ತು. ಒಟ್ಟು 256 ಸಿನಿಮಾಗಳನ್ನು ಮಾಡಿದ್ದಾರೆ. ವಿಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ಕಲಾವಿದರಿಗೆ ಇರುವ ಭಾವ ಅಭಿವ್ಯಕ್ತಿಯ ಕಲೆಯನ್ನು ಅವರಲ್ಲಿ ಕಾಣಬಹುದು. ಅವತ್ತಿನ ಕನ್ನಡ ಸಿನಿಮಾಕ್ಕೆ ಇವತ್ತಿನ ತಂತ್ರಜ್ಞಾನ ಸಿಕ್ಕಿದ್ದರೆ ಅಂತರರಾಷ್ಟ್ರೀಯ ಕಾಮಿಡಿಯನ್ ಆಗಿರುತ್ತಿದ್ದರು.

◆ **ಬಾಲ್ಯದ ದಿನಗಳಲ್ಲಿ ನಿಮ್ಮ ಕನಸು ಏನಿತ್ತು?**

ನಟ ಆಗುವ ತನಕ ನಾನು ತೆರೆಯ ಮೇಲೆ ಬರಬೇಕು ಎಂದುಕೊಂಡಿರಲಿಲ್ಲ. ಎಷ್ಟೋ ಜನ ನಟಿಸುವಂತೆ ಕೇಳಿದ್ದೂ ಇದೆ. ಆಗೆಲ್ಲ ನನಗೂ ಅದಕ್ಕೂ ದೂರ ಎಂದೇ ಹೇಳುತ್ತಿದ್ದೆ. ನನಗೆ ಕ್ರೀಡೆಯ ಬಗ್ಗೆ ತುಂಬ ಪ್ರೀತಿ ಇತ್ತು. ಈಗ ನಟನೆಯ ಆಳ ಅರಿವಾಗಿದೆ. ಅದರ ಜವಾಬ್ದಾರಿ ಕೂಡ ಗೊತ್ತಾಯಿತು. ಇದಕ್ಕೆ ತುಂಬ ಸಿದ್ಧತೆ ಬೇಕು. ಪ್ರತಿ ಹಂತದಲ್ಲೂ ಕಲಿಕೆ ಇರುತ್ತದೆ. ಚಿತ್ರಕಲಾ ಪರಿಷತ್ತಿನಲ್ಲಿ ಪದವಿ ಪಡೆದಿದ್ದೇನೆ. ಕಲಾ ನಿರ್ದೇಶನವನ್ನೂ ಮಾಡುತ್ತಿದ್ದೇನೆ. ಬಾಲ್ಯದ ದಿನಗಳಲ್ಲಿ ಚಿತ್ರಕಲೆಯಲ್ಲಿ ಒಲವು ಇತ್ತು. 'ಲಾಸ್ಟ್ ಬಸ್' ಸಿನಿಮಾಕ್ಕೆ ಕಲಾ ನಿರ್ದೇಶನ ನನ್ನದೆ. 150 ಬ್ರಾಂಡ್‌ಗಳ ಜಾಹೀರಾತಿಗೆ ಕಲಾ ನಿರ್ದೇಶನ ಮಾಡಿದ್ದೇನೆ. ವಿಶ್ವಪ್ರಸಿದ್ಧ ಕುಂಭ ಮೇಳದಲ್ಲಿ 6.5 ಲಕ್ಷ ಚದರಡಿಯ ಚಿತ್ರಕಲೆಯನ್ನು ಕೇವಲ 60 ದಿನಗಳಲ್ಲಿ ಮಾಡಿದ್ದೆ. ಅದಕ್ಕೆ 120 ಜನ ನನ್ನ ಜೊತೆ ಕೆಲಸ ಮಾಡಿದ್ದರು.

■ **ರಾಘವೇಂದ್ರ ಕೆ.**